# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ

ಕವಿಪ್ರನಿನಿ/ಬಿ93/35989/2018-19-೮೪೫-೫೧

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: 08 MAY 2018

**NDCPS ಅಧಿಕಾರಿಗಳ/ನೌಕರರ ವೈಯಕ್ತಿಕ ಗಮನಕ್ಕೆ**

**ಸುತ್ತೋಲೆ**

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕವಿಪ್ರನಿನಿ/ ವಿಸಕಂಗಳ ನೌಕರರು / ಅಧಿಕಾರಿಗಳು ಅವರ ಖಾಯಂ ವಿಶ್ರಾಂತಿ ವೇತನ ಸಂಖ್ಯೆ(PPAN) ಖಾತೆಯಲ್ಲಿ ಜಮಾ ಇರುವ ಪಿಂಚಣಿ ವಂತಿಗೆಯ ವಿವರಗಳನ್ನು ಪಡೆದು ಪರಿಶೀಲಿಸಿಕೊಳ್ಳುವ ಬಗ್ಗೆ.

ಉಲ್ಲೇಖ
1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 4/ಪಿಇಟಿ 2005 ದಿನಾಂಕ: 31.03.2003
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ: 05.07.2007
3. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ದಿನಾಂಕ: 21.08.2007
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ93/35989/2016-17 ದಿನಾಂಕ: 21.02.2017
5. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಕೆಸಿಒ-129/83026/2017-18 ದಿನಾಂಕ: 23.11.2017

*****

ಉಲ್ಲೇಖ 2ರ ನಿಗಮದ ಆದೇಶದಲ್ಲಿ, ಕವಿಪ್ರನಿನಿ/ವಿಸಕಂಗಳಲ್ಲಿ ದಿನಾಂಕ:01.04.2006 ನಂತರ ಸೇವೆಗೆ ಸೇರಿದ ಅಧಿಕಾರಿ / ನೌಕರರಿಗೆ ಸದರಿ ದಿನಾಂಕದಿಂದ ಅಂದರೆ ದಿನಾಂಕ:01.04.2006 ರಿಂದ ಅನ್ವಯವಾಗುವಂತೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು (NDCPS) ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿ ಸಂಬಂಧಿಸಿದ ನೌಕರರು / ಅಧಿಕಾರಿಗಳಿಂದ ಮೂಲ ವೇತನ (ಡಿ.ಪಿ. ಒಳಗೊಂಡಂತೆ) ಮತ್ತು ತುಟ್ಟಿಭತ್ಯೆಯ ಮೊತ್ತದ ಮೇಲೆ ಶೇಕಡ 10 ರಷ್ಟು ವಂತಿಗೆ ಪಡೆದು ಅದಕ್ಕೆ ಸಮನಾದ ಕಂಪನಿಯ ವಂತಿಗೆಯನ್ನು ಸೇರಿಸಿ ನಿಧಿಯಲ್ಲಿ ಜಮಾವಣೆ ಮಾಡಲಾಗುತ್ತಿದೆ.

ನಿಗಮದ ಆದೇಶ ದಿನಾಂಕ:04.05.2015 ರಲ್ಲಿ ಈ ಯೋಜನೆಯ ನಿರ್ವಹಣೆಯನ್ನು LIC-P&GS Unit ಗೆ ವಹಿಸಲಾಗಿದೆ. LIC-P&GS Unit ಸಂಸ್ಥೆಯು ನೌಕರವಾರು / ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು ಯೋಜನೆ ವ್ಯಾಪ್ತಿಯ ಫಲಾನುಭವಿಗಳು ತಂತ್ರಾಂಶದ ಮೂಲಕ ವೀಕ್ಷಿಸಲು ಅಗತ್ಯ ಏರ್ಪಾಡುಗಳನ್ನು ಮಾಡಬೇಕಿರುತ್ತದೆ. ಈ ಸಂಬಂಧ LIC ಸಂಸ್ಥೆಯು ಅಗತ್ಯ ತಂತ್ರಾಂಶವನ್ನು ಅಭಿವೃದ್ಧಿ

ಪಡಿಸುವ ಕಾರ್ಯವು ಪ್ರಗತಿಯಲ್ಲಿದ್ದು ತದನಂತರ ನೌಕರವಾರು/ತಿಂಗಳವಾರು ಪಿಂಚಣಿ ವಂತಿಗೆ ವಿವರಗಳನ್ನು ಬಡ್ಡಿ ಗಳಿಕೆಯ ಸಹಿತ ಯೋಜನೆಯ ಫಲಾನುಭವಿಗಳು ತಿಳಿಯಬಹುದಾಗಿದೆ.

ಈ ಯೋಜನೆ ವ್ಯಾಪ್ತಿಯ ನೌಕರರು/ಅಧಿಕಾರಿಗಳ ದಿನಾಂಕ:01.04.2006 ರಿಂದ 30.06.2016ರ ವರೆಗಿನ ಪಿಂಚಣಿ ವಂತಿಗೆ ವಿವರಗಳನ್ನು ಕವಿಪ್ರನಿನಿ ಜಾಲತಾಣದಲ್ಲಿ ಈ ಹಿಂದೆಯೇ ಪ್ರಕಟಿಸಿ, ದಿನಾಂಕ 21.02.2017ರ ಸುತ್ತೋಲೆಯಲ್ಲಿ ಜಾಲತಾಣ ಆಧಾರಿತ ತಂತ್ರಾಂಶದಲ್ಲಿ ವೀಕ್ಷಿಸಲು ಅನುಸರಿಸಬೇಕಾದ ಕ್ರಮಗಳೊಂದಿಗೆ, ನ್ಯೂನ್ಯತೆಗಳು ಕಂಡುಬಂದಲ್ಲಿ, ಆಕ್ಷೇಪಣೆಗಳೇನಾದರು ಇದ್ದಲ್ಲಿ ಮನವಿಗಳನ್ನು ಸಲ್ಲಿಸಲು ಸಹಾ ಸೂಚಿಸಲಾಗಿತ್ತು. ಮೇಲಿನ ಸುತ್ತೋಲೆಯನ್ವಯ ಅಧಿಕಾರಿ/ನೌಕರರು ಸಲ್ಲಿಸಿದ ಆಕ್ಷೇಪಣೆಗಳನ್ನು ಪರಿಶೀಲಿಸಿ ಸರಿಪಡಿಸಲಾಗಿದೆ.

ಮುಂದುವರೆದು, ತದನಂತರದ ಅವಧಿಗೆ ಅಂದರೆ ದಿನಾಂಕ:01.07.2016 ರಿಂದ 31.03.2018ರ ವರೆಗಿನ ಅವಧಿಯಲ್ಲಿ ಅಧಿಕಾರಿ/ನೌಕರರಿಂದ ವಸೂಲಾಗಿರುವ ಪಿಂಚಣಿ ವಂತಿಗೆಯ ವಿವರಗಳನ್ನೊಳಗೊಂಡ ಪೂರ್ಣ ಮಾಹಿತಿಗಳನ್ನು ಜಾಲತಾಣ ಆಧಾರಿತ ತಂತ್ರಾಂಶದಲ್ಲಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ ಮತ್ತು ಸದರಿ ವಿವರಗಳನ್ನು ವೀಕ್ಷಿಸಲು ಈ ಕೆಳಕಂಡ ಕ್ರಮಗಳನ್ನು ಅನುಸರಿಸುವಂತೆ ಸೂಚಿಸಲಾಗಿದೆ.

1. ಸದರಿ ತಂತ್ರಾಂಶವನ್ನು ಕವಿಪ್ರನಿನಿ ವೆಬ್‌ಸೈಟ್‌ನಲ್ಲಿ (www.kptcl.com ⟶ ಮುಖಪುಟ ⟶ NDCPS Contribution details from 04/2006 to 03/2018) ಪ್ರಕಟಿಸಲಾಗಿರುತ್ತದೆ.
   ಮುಂದುವರೆಯಲು ನೌಕರರು User ID & Password ಗೆ ಮೀಸಲಾದ ಎರಡೂ ಜಾಗದಲ್ಲಿ ಅವರ PPAN ದಾಖಲಿಸಬೇಕು.
2. ತಂತ್ರಾಂಶಕ್ಕೆ Log-in ಆದ ನಂತರ ಗಣಕ ಯಂತ್ರದ ಪರದೆಯ ಮೇಲೆ Reports ಮತ್ತು Change password ಎನ್ನುವ ಶೀರ್ಷಿಕೆಗಳು ಕಾಣುತ್ತವೆ.
3. ಮೊದಲನೆಯ ಶೀರ್ಷಿಕೆ Reports ಅಡಿಯಲ್ಲಿ ಎರಡು ಉಪಶೀರ್ಷಿಕೆಗಳನ್ನು ಕಾಣಬಹುದು. ಅವುಗಳು,
   i. Annexure-1 ಮತ್ತು
   ii. Contribution Details
4. Annexure-1 ಉಪಶೀರ್ಷಿಕೆಯನ್ನು ಉಪಯೋಗಿಸಿಕೊಂಡು ನೌಕರರು ತಮ್ಮ ವೈಯಕ್ತಿಕ ವಿವರಗಳನ್ನು (ಅನುಬಂಧ-1) ನಾಮನಿರ್ದೇಶನ (Nomination) ವಿವರ ಸಹಿತ ತಿಳಿದುಕೊಳ್ಳಬಹುದಾಗಿದೆ.
5. Contribution Details ಉಪಶೀರ್ಷಿಕೆಯನ್ನು ಉಪಯೋಗಿಸಿಕೊಂಡು ನೌಕರರು ಅವರಿಗೆ ಬೇಕಾದ ಪಿಂಚಣಿ ವಂತಿಗೆ ವಿವರಗಳನ್ನು ಬೇಕಾದ ಅವಧಿಗೆ ಪಡೆದುಕೊಳ್ಳಬಹುದು.

ಈಗಾಗಲೇ ಮೇಲೆ ತಿಳಿಸಿರುವಂತೆ, ಎಲ್ಲಾ ಲೆಕ್ಕ ಘಟಕಗಳು ಮತ್ತು ಈ ಯೋಜನೆಯ ಫಲಾನುಭವಿಗಳು ಪಿಂಚಣಿ ವಂತಿಗೆ ವಿವರಗಳನ್ನು ಪ್ರಕಟಿಸಲಾಗಿರುವ ತಂತ್ರಾಂಶದಿಂದ ಪಡೆದು ಅದು ಸರಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ.

ಮಾಸಿಕ ಪಿಂಚಣಿ ವಂತಿಗೆ ವಿವರಗಳಲ್ಲಿ ವ್ಯತ್ಯಾಸಗಳೇನಾದರೂ ಕಂಡುಬಂದಲ್ಲಿ ಹಾಗೂ ನಾಮನಿರ್ದೇಶನದ ಬದಲಾವಣೆ ಇದ್ದಲ್ಲಿ, ಸಮುಚಿತ ಮಾರ್ಗದಲ್ಲಿ (through proper channel) ಮನವಿಯನ್ನು **ದಿನಾಂಕ:15.06.2018ರ** ಒಳಗಾಗಿ ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ಸಲ್ಲಿಸುವುದು. **ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ವೀಕರಿಸಿದ ಮನವಿ ಪತ್ರಗಳ ಪರಿಶೀಲನಾ ಕಾರ್ಯವನ್ನು 2018ರ ಜುಲೈ 15ನೇ ತಾರೀಖಿನೊಳಗಾಗಿ ಪೂರ್ಣಗೊಳಿಸಲು ನಿರ್ಣಯಿಸಲಾಗಿದೆ.** ಈ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಬಡ್ಡಿ ಮೊತ್ತವನ್ನು (LIC ಗೆ ಯೋಜನೆ ನಿರ್ವಹಣೆ ವಹಿಸುವ ಮುನ್ನ) ಫಲಾನುಭವಿಗಳಿಗೆ ಹಂಚಿಕೆ ಮಾಡುವುದರಿಂದ ಆ ನಂತರ ವಿವರಗಳನ್ನು ತಿದ್ದುಪಡಿ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

ಈ ಯೋಜನೆಯ ಫಲಾನುಭವಿಗಳಲ್ಲಿ ಗಣಕ ಯಂತ್ರವನ್ನು ಉಪಯೋಗಿಸಲು ಬಾರದೆ ಇರುವವರು ಇದ್ದಲ್ಲಿ, ಅಂತಹವರ ಪಿಂಚಣಿ ವಂತಿಗೆ ವಿವರಗಳನ್ನು ಸಂಬಂಧಿಸಿದ ವೇತನ ಬಟವಾಡೆ ಅಧಿಕಾರಿಗಳು ಪಡೆದು ನೌಕರರಿಗೆ ಮಾಹಿತಿ ನೀಡಿ ಸ್ವೀಕೃತಿ ಪಡೆಯುವುದು.

ಈ ಸುತ್ತೋಲೆಯನ್ನು ಲೆಕ್ಕ ಘಟಕ ಮತ್ತು ತಮ್ಮ ವ್ಯಾಪ್ತಿಯ ಇತರೆ ಕಚೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಚುರ ಪಡಿಸುವ ಜೊತೆಗೆ ಸಂಬಂಧಿಸಿದ ಎಲ್ಲಾ ನೌಕರರಿಗೆ ವಿಷಯ ತಿಳಿಸಲು ಮೊಬೈಲ್ ಸಂದೇಶ, ಕಂಪನಿ ಮಟ್ಟದಲ್ಲಿ/ಲೆಕ್ಕ ಘಟಕ ಮಟ್ಟದಲ್ಲಿ ಸುತ್ತೋಲೆ ಹೊರಡಿಸುವುದು, ಕೆಳಗಿನ ಎಲ್ಲಾ ಕಚೇರಿ ಮುಖ್ಯಸ್ಥರಿಗೆ ಸೂಚಿಸುವುದು, ಅಧಿಕಾರಿಗಳ ಮಾಸಿಕ ಸಭೆಗಳಲ್ಲಿ ವಿಷಯ ತಿಳಿಸುವುದು ಮತ್ತು ಇತರೆ ಮಾರ್ಗಗಳ ಮುಖೇನ ಸರ್ವ ಪ್ರಯತ್ನ ಮಾಡುವಂತೆ ಕೋರಿದೆ.

ನಿರ್ದೇಶಕರು(ಆ ಮತ್ತು ಮಾ.ಸಂ)

ಪ್ರತಿಗಳು:

1. ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಎಸ್ಕಾಂಗಳು,
2. ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಲ್ಲಾ ಮುಖ್ಯ ಆರ್ಥಿಕ ಅಧಿಕಾರಿಗಳು, ಎಸ್ಕಾಂಗಳು,
3. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.
4. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಲ್ ರವರ ಆಪ್ತ ಕಾರ್ಯದರ್ಶಿರವರಿಗೆ. ವ್ಯವಸ್ಥಾಪಕ ನಿರ್ದೇಶಕರು ಗಮನಕ್ಕೆ ತರುವಂತೆ ಕೋರಲಾಗಿದೆ.
5. ನಿರ್ದೇಶಕರು(ಹಣಕಾಸು), ರವರ ಆಪ್ತ ಕಾರ್ಯದರ್ಶಿರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ http:/www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
2. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
4. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
5. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ಪರಿಶೋಧನೆ) ಕವಿಪ್ರನಿನಿ / ಎಸ್ಕಾಂಗಳು